**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ: 199/2024**

ಫಿರ್ಯಾದಿಃ ಅಕ್ಷಯ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್,
ಹೊನ್ನಾವರ, ನಿಷ್ವತ್ ಮ್ಯಾನೇಜರ್,
ಅನೀಲ್ ಎಫ್ ಬ್ರಿಟ್ಟೋ,
ವಯಸ್ಸುಃ ಮ್ಯಾನೇಜರ್, ಹೊನ್ನಾವರ.

**–ವಿರುದ್ಧ–**

ಆರೋಪಿಃ ಇಬ್ರಾಹಿಂ ಯುಸೂಫ್ ಸಾಬ್,
ಸಾಕೀನಃ ಪುರಭವನ ಮುನ್ಸಿಪಲ್ ಹಾಲ್ ಹತ್ತಿರ,
ಪ್ರಭಾತನಗರ, ತಾಲೂಕುಃ ಹೊನ್ನಾವರ.

**ಆರೋಪಣೆ**

ಶ್ರೀ ಬಿ.ಸಿ. ಚಂದ್ರಶೇಖರ್, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ಆರೋಪಣೆಯನ್ನ ಹೊರಿಸುತ್ತಿದ್ದೇನೆ.

ಆರೋಪಿಯು ಪಿರ್ಯಾದಿಯ ಸಂಸ್ಥೆಯಿಂದ ದಿನಾಂಕಃ13–02–2019 ರಂದು ರೂ.1,00,000/–ಗಳನ್ನು ಸಾಲವಾಗಿ ಪಡೆದುಕೊಂಡಿದ್ದು, ಮಹಮ್ಮದ್ ಅಲಿ ಸಹೇದ್‌ರವರು ದಿನಾಂಕಃ18–03–2019 ರಂದು ರೂ.1,00,000/–ವನ್ನು ಹುಸ್ಸೇನ್ ಅಬ್ದುಲ್ ರೆಹಮಾನ್ ಸಾಬ್‌ರವರು ದಿನಾಂಕಃ 30–03–2019 ರಂದು ರೂ.85,000/–ವನ್ನು ಹಾಗೂ ಆರೀಫ್ ಫಕೀರ್ ಸಾಹೇಬ್‌ರವರು ದಿನಾಂಕಃ07–08–2021 ರಂದು ರೂ.1,00,000/–ವನ್ನು ಪಿರ್ಯಾದಿ ಸಂಸ್ಥೆಯಿಂದ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಮೂವರು ಪಡೆದ ಸಾಲಕ್ಕೆ ಆರೋಪಿಯು ಜಾಮೀನುದಾರನಾಗಿ ಒಪ್ಪಿ ಸಹಿ ಮಾಡಿದ್ದು, ಆರೋಪಿಯು ತಾನು ಪಡೆದ ಸಾಲಕ್ಕೆ ಹಾಗೂ ಜಾಮೀನುದಾರನಾಗಿ ಒಪ್ಪಿ ಸಹಿ ಮಾಡಿದ ಮೂವರ ಸಾಲದ ಹಣಕ್ಕೂ ಸಹ ಜವಾಬ್ದಾರನಾಗಿದ್ದು, ಸದರಿ ಸಾಲವನ್ನು ಸರಿಯಾಗಿ ಕಂತಿನ ಪ್ರಕಾರ ಅವಧಿಗೆ ತುಂಬದೇ ಕಟ್ಟಬಾಕಿ ಆಗಿದ್ದರಿಂದ ಪಿರ್ಯಾದಿ ಸಂಸ್ಥೆಯವರು ಸದರಿ ಸಾಲಕ್ಕೆ ಜವಾಬ್ದಾರನಾದ ಆರೋಪಿಯ ಹತ್ತಿರ ಸದರಿ ಸಾಲವನ್ನು ವಸೂಲಿಯಿಂದ ಕೊಡುವಂತೆ ಕೇಳಲಾಗಿ, ಆರೋಪಿಯು ತಾನು ಪಡೆದ ಸಾಲ ಹಗೂ ಜಾಮೀನುದಾರನಾಗಿ ಒಪ್ಪಿ ಸಹಿ ಮಾಡಿದ ಮೂವರ ಸಾಲಕ್ಕೆ ಹಣಕ್ಕೆ ಸಂಬಂಧಿಸಿ ಸದರಿ ಹಣದ ಮರುಪಾವತಿಗಾಗಿ ಕೆನರಾ ಬ್ಯಾಂಕ್

ಹೊನ್ನಾವರ ಶಾಖೆಯ ನಿಮ್ಮ ಖಾತೆಯ ದಿನಾಂಕಃ29-01-2022 ರಂದು ಚೆಕ್ ನಂ.114673 ನಂಬರಿನ ರೂ.3,65,000/-ಗಳ ಚೆಕ್‌ನ್ನು ನೀಡಿದ್ದು, ಸದರಿ ಚೆಕ್ಕನ್ನು ಬ್ಯಾಂಕಿಗೆ ಹಾಕಿದ ಕೂಡಲೇ ಹಣ ಬಟವಡೆಯಾಗುತ್ತದೆ ಎಂಬ ಭರವಸೆ ನೀಡಿದ್ದು, ಪಿರ್ಯಾದಿಯು ಆರೋಪಿಯ ಮಾತಿನ ಮೇಲೆ ನಂಬಿಕೆ, ವಿಶ್ವಾಸ ಇಟ್ಟು, ಸದರಿ ಚೆಕ್ಕನ್ನು ಪಿರ್ಯಾದಿದಾರರು ಇಂಡಿಯನ್ ಓವರ್ ಸೀಸ್ ಬ್ಯಾಂಕ್ ಹೊನ್ನಾವರ ಶಾಖೆಗೆ ಸಲ್ಲಿಸಿದಾಗ ಅದು ನಗದೀಕರಣಗೊಳ್ಳದೆ "ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲವಾಗಿ" ಎಂಬ ಹಿಂಬರಹದೊಂದಿಗೆ ದಿನಾಂಕಃ01-02-2022 ರಂದು ವಾಪಾಸ್ ಬಂದಿದ್ದು, ನಂತರ ಪಿರ್ಯಾದಿಯವರು ಚೆಕ್ಕಿನ ಹಣವನ್ನು ವಾಪಾಸು ಮಾಡುವಂತೆ ದಿನಾಂಕಃ08-02-2022 ರಂದು ನೋಟಿಸ್ ನೀಡಿದ್ದು ಅದು ನಿಮಗೆ ದಿನಾಂಕಃ 10-02-2022 ರಂದು ತಲುಪಿದ್ದರೂ ಸಹ ನೀವು ಕೊಡಬೇಕಾದ ಹಣವನ್ನು ಮರುಪಾವತಿಸದೆ ನೆಗೋಶಿಯೆಬಲ್ ಇನ್ಸ್ಟ್ರುಮೆಂಟ್ ಕಾಯಿದೆ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ 1. ಮೇಲೆ ಓದಿ ಹೇಳಲಾದ ನಿಮ್ಮ ಮೇಲಿನ ಆರೋಪಣೆಯನ್ನ ಒಪ್ಪಿಕೊಳ್ಳುವಿರಾ?

ಉತ್ತರಃ

ಪ್ರಶ್ನೆ 2. ನಿಮ್ಮ ಪರವಾಗಿ ಯಾವುದಾದರೂ ಪ್ರತಿರಕ್ಷ ಸಾಕ್ಷ್ಯ ಇದೆಯೆ?

ಉತ್ತರಃ

**(ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲ್ಕಂಡ ಆರೋಪಣೆಯನ್ನ ನನ್ನ ಸಮಕ್ಷಮ ಆರೋಪಿಗೆ ಓದಿ ಹೇಳಿ, ಕೇಳಲಾಗಿ ಆತನು ನೀಡಿದ ಉತ್ತರವನ್ನ ನನ್ನ ಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು.)**

**ಸಹಿ ಇದೆ.**

ದಿನಾಂಕಃ 30-10-2024.

ಸ್ಥಳಃ ಹೊನ್ನಾವರ

**(ಶ್ರೀ ಬಿ.ಸಿ. ಚಂದ್ರಶೇಖರ್,)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**